ಆದುದರಿಂದ ಈ ಜಾಗವನ್ನು ತಾವು ಪರಿಶೀಲನೆ ಮಾಡಬೇಕು. ಇದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಕ್ಟೋಬರ್ 1997ರ ವರೆಗೆ ವಾಯಿದೆ ಇದೆ. ತಾವು ಇದನ್ನು ಸ್ವಾಧೀನ ಮಾಡಿಕೊಂಡರೆ, ಮುಂದೆ ಉಡುಪಿ ಕ್ಷೇತ್ರದಲ್ಲಿ ಒಂದು ದೊಡ್ಡ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಈ ಪ್ರಪೋಜಲ್ ಸಾರಿಗೆ ಸಂಸ್ಥೆಯ ಮುಂದೆ ಇಲ್ಲ. ಮಾನ್ಯ ಸಭಾಪತಿಯವರು ಪುನಃ ಈ ವಿಚಾರವನ್ನು ಹೇಳಿದ್ದಾರೆ. ನಾನು ಇದನ್ನು ಪುನಃ ಪರಿಶೀಲನೆ ಮಾಡುವಂತಹ ಭರವಸೆಯನ್ನು ಕೊಡುತ್ತೇನೆ.

ತಿರುಮಲ ತಿರುಪತಿ ದೇವಸ್ಥಾನದಲ್ಲಿ ಕರ್ನಾಟಕದ ಅತಿಥಿ ಗೃಹ

112 (953) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಮುಜರಾಯಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಿದ್ಧವಾದ ತಿರುಮಲ-ತಿರುಪತಿ ದೇವಸ್ಥಾನದಲ್ಲಿ ಕರ್ನಾಟಕಕ್ಕೆ ಸೇರಿದ ಅತಿಥಿ ಗೃಹಗಳು ಎಷ್ಟು?

ಆ) ಕರ್ನಾಟಕ ರಾಜ್ಯದಿಂದ ಹೋಗುತ್ತಿರುವ ಯಾತ್ರಾರ್ಥಿಗಳಿಗೆ ನೀಡುತ್ತಿರುವ ಸೌಲಭ್ಯಗಳೇನು.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

ಅ) ಕರ್ನಾಟಕ ರಾಜ್ಯ ಛತ್ರ ತಿರುಮಲದಲ್ಲಿ ಈ ಕೆಳಕಂಡಂತೆ ವಸತಿ ಸೌಕರ್ಯವಿದೆ.

		ಕೊಠಡಿಗಳ ಸಂಖ್ಯೆ
1) ಅತಿಥಿಗೃಹ	-1	8
2) ನಿರೀಕ್ಷಣಾ ಭವನ	-1	2
3) ಕರ್ನಾಟಕ ಕಲ್ಯಾಣ ಮಂಡಪ	-1	24+1 ಕಲ್ಯಾಣ ಮಂಟಪ
4) ಕರ್ನಾಟಕ ಪ್ರವಾಸಿಸೌಧ	-1	88+1 "
5) ಕುಠೀರಗಳು	-17	48

ಅತಿಥಿಗೃಹದ 8 ಕೊಠಡಿಗಳು ಮತ್ತು ನಿರೀಕ್ಷಣಾ ಭವನದ 2 ಕೊಠಡಿಗಳನ್ನು ಹೊರತುಪಡಿಸಿ ಉಳಿದ ಕೊಠಡಿಗಳನ್ನು ದಾನ ಯೋಜನೆಯಿಂದ ನಿರ್ಮಿಸಲಾಗಿದೆ.

ಆ) ವಸತಿ ಸೌಲಭ್ಯ ಒದಗಿಸುವುದರ ಜೊತೆಗೆ ದರ್ಶನ ಹಾಗೂ ಪ್ರಸಾದದ ಬಗ್ಗೆ ತಿಳುವಳಿಕೆಯನ್ನು ನೀಡಲಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ಸರ್ಕಾರದ ಪರವಾಗಿ ತಿರುಮಲ-ತಿರುಪತಿಯಲ್ಲಿ ಕಟ್ಟಿರತಕ್ಕ ಅತಿಥಿ ಗೃಹಗಳು ಮತ್ತು ಛತ್ರಗಳು ಚೆನ್ನಾಗಿಲ್ಲ ಮತ್ತು ಕೊಠಡಿಗಳ ವ್ಯವಸ್ಥೆ ಸರಿಯಿಲ್ಲ. ಅದನ್ನು ಉತ್ತಮಪಡಿಸಬೇಕೆಂದುಯಾತ್ರಾರ್ಥಿಗಳ ಒತ್ತಾಯವಾಗಿದೆ. ತಿರುಪತಿ ದೇವಸ್ಥಾನಕ್ಕೆ ಕರ್ನಾಟಕದಿಂದ ಮತ್ತು ಹಳೆಯ ಮೈಸೂರಿನ ಮಹರಾಜರ ಮನೆತನದವರು ಹೆಚ್ಚಿನ ದೇಣಿಗೆ ಕೊಟ್ಟಿರುವಂಥ ಇತಿಹಾಸ ಇದೆ. ಹಾಗೆಯೇ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಗುಂಡುರಾಯರ ಕಾಲದಲ್ಲಿ ಒಂದು ದೊಡ್ಡ ಕಂಭವನ್ನು ಕೊಟ್ಟಿದ್ದುದು ತಮಗೆಲ್ಲರಿಗೆ ಗೊತ್ತಿದೆ. ನಮ್ಮ ಕರ್ನಾಟಕದಿಂದ ಅಲ್ಲಿಗೆ ಹೋಗತಕ್ಕಂಥ ಯಾತ್ರಾರ್ಥಿಗಳು ಜಾಸ್ತಿ ಇದ್ದಾರೆ. ಆದರೆ ನಮ್ಮ ಯಾತ್ರಾರ್ಥಿಗಳನ್ನು ಕಡೆಗಾಣಿಸತಕ್ಕಂಥ ಸ್ವಭಾವ ಏನಿದೆ, ಅದು ಆಗಬಾರದೆನ್ನುವ ದೃಷ್ಟಿಯಿಂದ ಅಲ್ಲಿರತಕ್ಕಂಥ ಕಾರ್ಯಕಾರಿ ಸಮಿತಿಗೆ ಕರ್ನಾಟಕದ ಇಬ್ಬರನ್ನು ನೇರವಾಗಿ ನಾಮಕರಣ ಮಾಡಬೇಕೆಂದು ನಮ್ಮ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇವೆ. ಲೆಕ್ಕಚಾರವಾಗಿ ನೋಡಿದರೆ ಆ ದೇವರು ನಮ್ಮದು ಮತ್ತು ನಮ್ಮ ರಾಜ್ಯಕ್ಕೆ ಸೇರಿದ್ದು ಕರ್ನಾಟಕ ರಾಜ್ಯದ ಸಮಗ್ರ ಇತಿಹಾಸ ತೆಗೆದುಕೊಂಡಾಗ ಅಲ್ಲಿಯ ದೇವಸ್ಥಾನ ಮತ್ತು ದೇವರು ನಮಗೆ ಸೇರಿದ್ದಾಗಿರುತ್ತದೆ. ಆ ದೃಷ್ಟಿಯಿಂದ ನಮ್ಮ ರಾಜ್ಯದಿಂದ ಹೋಗತಕ್ಕಂಥ ಭಕ್ತಾದಿಗಳಿಗೆ ಹೆಚ್ಚಿನ ಸೌಲಭ್ಯ ಮತ್ತು ಗೌರವ ಅಲ್ಲಿ ಸಿಗುವಂತಾಗಬೇಕು. ಮಾನ್ಯ ಅಧ್ಯಕ್ಷರು ಅದನ್ನು ಒಪ್ಪುವುದಿಲ್ಲವೆಂದು ತೋರುತ್ತದೆ.

ಅಧ್ಯಕ್ಷರು: ನಮ್ಮ ದೇವರು ಎಂದು ನಮಗೆ ಗೊತ್ತಿದೆ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ದೇವರನ್ನು ನಮ್ಮ ಕರ್ನಾಟಕದ್ದು ಎಂದು ಹೇಳುವುದಾದರೆ, ದೇವರು ಸರ್ವಂತರ್ಯಾಮಿ ಲ್ಲವೆಂದು ನಾವೆಲ್ಲ ಒಪ್ಪಿಕೊಂಡ ಹಾಗೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜು: ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದಲೇ ಉತ್ತರವನ್ನು ಕೇಳಬಯಸುತ್ತೇನೆ. ಇದು ಹಾಸ್ಯವೆಂದು ಭಾವಿಸಬೇಡಿ. ನಮಗೆ ಅಲ್ಲಿ ಅಂತಹ ಪರಿಸ್ಥಿತಿ ಇದೆ. ಕರ್ನಾಟಕದ ಜನರ ಮೇಲೆ ಅಲ್ಲಿ ವ್ಯವಸ್ಥಿತವಾಗಿ ಒಂದು ರೀತಿಯ ಶೋಷಣೆ ನಡೆಯುತ್ತಿದೆ. ಆದ್ದರಿಂದ ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ-ಅಲ್ಲಿಯ ನಮ್ಮ ಧರ್ಮ ಛತ್ರಗಳು ಅತ್ಯಂತ ಸುವ್ಯವಸ್ಥಿತವಾಗಿರಬೇಕು. ಹೊಸದಾಗಿ ಧರ್ಮಛತ್ರಗಳನ್ನು ಕಟ್ಟಿಸಬೇಕು. ಅಲ್ಲಿಯ ಕಾರ್ಯಕಾರಿ ಸಮಿತಿಗೆ ಕರ್ನಾಟಕದಿಂದ ಇಬ್ಬರನ್ನು ನಾಮಕರಣ ಮಾಡಬೇಕು.

ಅಧ್ಯಕ್ಷರು: ತಿರುಪತಿಗೆ ಸಂಬಂಧಿಸಿದ ಪ್ರಶ್ನೆಯನ್ನು ಮಾನ್ಯ ಗೋವಿಂದೆಗೌಡರಿಗೆ ಕೇಳಬೇಕು. ಮಾನ್ಯ ಪಟೇಲರನ್ನು ಕೇಳಿದರೆ ಅವರು ಏನು ಹೇಳುತ್ತಾರೆ? ಗೋವಿಂದೆಗೌಡರಿಂದ ನೀವು ಉತ್ತರ ಕೇಳಬಹುದು.

ಶ್ರೀ ವಾಟಾಳ್ ನಾಗರಾಜು: ಮಾನ್ಯ ಅಧ್ಯಕ್ಷರೆ, ಮಾನ್ಯ ಗೋವಿಂದೆ ಗೌಡರನ್ನು ಈ ಪ್ರಶ್ನೆಗೆ ಎಳೆಯುವುದು ಬೇಡ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡುತ್ತಾರೆ.. ಮಾನ್ಯ ಗೋವಿಂದೆಗೌಡರಿಗೆ ಅವರ ಕ್ಷೇತ್ರದಲ್ಲಿ ಬಹಳ ಪವಿತ್ರವಾದ ಶೃಂಗೇರಿ ಮಠ ಇದೆ.

ಶ್ರೀ ಹೆಚ್.ಎನ್. ನಂಜೇಗೌಡ: ಮಾನ್ಯ ಅಧ್ಯಕ್ಷರೆ, ನೀವು ಅಪ್ಪಣೆ ಕೊಡಿಸಿದ್ದೀರೇನು ಮಾನ್ಯ ಗೋವಿಂದೆಗೌಡರನ್ನು ಶೃಂಗೇರಿ ಮಠಾಧಿಪತಿಗಳಾಗಿ ಮಾಡಿ ಎಂದು.

ಅಧ್ಯಕ್ಷರು: ಏನಪ್ಪ, ನಿಮ್ಮ ಗೌಡರ ಮಧ್ಯೆ ಅವರು ಬದುಕುವುದಕ್ಕೆ ಆಗುವುದಿಲ್ಲ. ಅಷ್ಟೇ ಖಾಯಂ ಅವರಿಗೆ.

ಶ್ರೀ ವಾಟಾಳ್ ನಾಗರಾಜು: ಈ ಗೌಡರುಗಳ ಕಾಟ ನಮಗೂ ಕಷ್ಟ ಆಗಿಬಿಟ್ಟಿದೆ. ಈಕಡೆಯೂ ಗೌಡರ ಕಾಟ, ಆ ಕಡೆಯೂ ಗೌಡರ ಕಾಟ. ಮಧ್ಯದಲ್ಲಿ ನಾವು ಸಿಕ್ಕಿ ಹಾಕಿಕೊಂಡಿದ್ದೇವೆ.

ಅಧ್ಯಕ್ಷರು: ಹೌದು, ಹೌದು, ಅದಕ್ಕೆ 250 ತೆಗೆದುಕೊಂಡಿರುವುದು.

ಶ್ರೀ ವಾಟಾಳ್ ನಾಗರಾಜು: ಮಾನ್ಯ ಅಧ್ಯಕ್ಷರೆ, ತಿರುಪತಿಯಲ್ಲಿರತಕ್ಕಂಥ ನಮ್ಮ ರಾಜ್ಯದ ಛತ್ರಗಳು ಅಷ್ಟು ಚೆನ್ನಾಗಿಲ್ಲ. ಅದು ಅಭಿವೃದ್ಧಿ ಕಾರ್ಯದಲ್ಲಿ ಬಹಳ ಕುಂಠಿತವಾಗಿದೆ. ಅದನ್ನು ಅಭಿವೃದ್ಧಿಪಡಿಸಬೇಕು. ಇತಿಹಾಸದ ಪ್ರಕಾರ ತಮಗೆಲ್ಲ ಗೊತ್ತಿರುವ ಹಾಗೆ ತಿರುಪತಿ ದೇವಸ್ಥಾನಕ್ಕೆ ಮಹರಾಜರ ಕಾಲದಲ್ಲಿ ಆಭರಣಗಳು ಮುಂತಾದವು ಸೇರಿದಂತೆ ಬಹಳ ಅನುಕೂಲಗಳನ್ನು ಕರ್ನಾಟಕದಿಂದ ಮಾಡಿಕೊಟ್ಟಿದ್ದಾರೆ. ಆ ದೃಷ್ಟಿಯಿಂದ ಅಲ್ಲಿ ಹೆಚ್ಚಿನ ಹಕ್ಕು ಮತ್ತು ಅಧಿಕಾರ ಕರ್ನಾಟಕದವರಿಗೆ ಬರಬೇಕಾಗಿತ್ತು. ಆದರೂ ಚಿಂತೆ ಇಲ್ಲ. ನಮ್ಮವರಿಬ್ಬರನ್ನು ಅಲ್ಲಿನ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು. ಅಲ್ಲಿ ಹೊಸ ಛತ್ರಗಳನ್ನು ಕಟ್ಟಿಸಬೇಕು ಇದರಿಂದ ನಮ್ಮ ಯಾತ್ರಾರ್ಥಿಗಳಿಗೆ ಸ್ಥಳ ಸಿಕ್ಕದೆ ಅನಾನುಕೂಲವಾಗುತ್ತಿದ್ದುದ್ದನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿದ ಹಾಗೆ ಆಗುತ್ತದೆ. ಮತ್ತು ತಿರುಪತಿ ದೇರಸ್ಥಾನದಲ್ಲಿ ಸಣ್ಣ ಲಾಡು ಮತ್ತು ದೊಡ್ಡ ಲಾಡು ಎಂದು ಮಾಡುತ್ತಾರೆ. ದೊಡ್ಡ ಲಾಡು ದೊಡ್ಡ ಪೂಜೆ ಮಾಡತಕ್ಕಂಥವರಿಗೆ ಸಣ್ಣ ಲಾಡು ಸಣ್ಣ ಪೂಜೆ ಮಾಡತಕ್ಕಂಥವರಿಗೆ ಕೊಡುವಂಥ ಪದ್ಧತಿ ಇದೆ. ಇದನ್ನು ನಾನು ವಿರೋಧ ಮಾಡುತ್ತಿಲ್ಲ. ಅಲ್ಲಿಗೆ ಹೋದವರಿಗೆ ಲಾಡು ಸಹ ಸಿಗದೆ ಬಲತಕ್ಕಂಥ ಪರಿಸ್ಥಿತಿ ಇದೆ. ಹಾಗೆಯೇ ಬೇರೆ ಕಡೆ ಹೆಚ್ಚಿಗೆ ಹಣ ಕೊಟ್ಟು ಲಾಡುಗಳನ್ನು ತರತಕ್ಕಂಥ ಪರಿಸ್ಥಿತಿಯೂ ಸಹ ಇದೆ. ಇದರಿಂದ ಧಾರಾಳವಾಗಿ ಎಲ್ಲರಿಗೂ ಲಾಡು ಸಿಗತಕ್ಕಂಥ ವ್ಯವಸ್ಥೆಯೂ ಸಹ ಇದೆ. ಇದರಿಂದ ಧಾರಾಳವಾಗಿ ಎಲ್ಲರಿಗೂ ಲಾಡು ಸಿಗತಕ್ಕಂಥ ವ್ಯವಸ್ಥೆಯಾಗಬೇಕು. ನಾನು ಹೇಳಿದ ವಿಚಾರಗಳೆಲ್ಲವನ್ನು ಸರಿಪಡಿಸುವುದಕ್ಕೆ ಸರ್ಕಾರಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಮತ್ತು ಸಾರ್ಕರ ಸ್ಪಂದಿಸಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಹಿಂದೆ ನಮ್ಮ ಮಾನ್ಯ ಜಾಲಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ, ನಮ್ಮ ರಾಜ್ಯದ ಛತ್ರಗಳು ತಿರುಮಲದಲ್ಲಿ ಏನಿದೆ ಅದನ್ನು ಅವರು ಅಲ್ಲಿಗೆ ಹೋಗಿ ನೋಡಿದಾಗ, ತಿರುಮಲದಲ್ಲಿ ಒಂದು ಮಂಡಳಿ ಇದೆ. ಆ ಮಂಡಳಿಯ ಅಧಿಪತ್ಯದೊಳಗೆ ಇವರೆಲ್ಲ ಕೆಲಸ ಮಾಡುತ್ತಿದ್ದಾರೆ. ಕಂದಾಯ ಸಚಿವರು ಅಲ್ಲಿಗೆ ಹೋಗಿ ನೋಡಿದಾಗ, ಅಲ್ಲಿ ನಮ್ಮ ಪ್ರವಾಸೋದ್ಯಮ ಇಲಾಖೆಯವರಿಗೆ 10-14 ರೂಂಗಳನ್ನು ಬಿಟ್ಟಿದ್ದರು. ನಮ್ಮ ಕಂದಾಯ ಇಲಾಖೆಯವರಿಗೆ ಮತ್ತು ಪ್ರವಾಸೋಧ್ಯಮ ಇಲಾಖೆಯವರಿಗೆ ಸರಿಯಿರಲಿಲ್ಲ. ಅದಕ್ಕೋಸ್ಕರ ಅದನ್ನು ತೆಗೆದು, ಕಂದಾಯ ಇಲಾಖೆಯಾದರು

ನಡೆಸಲಿ ಅಥವಾ ಪ್ರವಾಸೋದ್ಯಮ ಇಲಾಖೆಯವರು ನಡೆಸಲು ಯಾವುದಾದರೂ ಒಂದು ಇಲಾಖೆ ನಡೆಸಲಿ ಎಂದು ಹೇಳಿದ್ದಕ್ಕೆ, ಅದಕ್ಕೆ ಜಾಲಪ್ಪನವರು ಹೋಗಿ ಕಂದಾಯ ಇಲಾಖೆಗೆ ತೆಗೆದುಕೊಂಡಿದ್ದರು. ಅದು ಆದನಂತರ ಏನು ಇಂಪ್ರೂವ್‌ಮೆಂಟ್ ಆಗಿದೆಯೋ ಗೊತ್ತಿಲ್ಲ. ಮೊದಲನೆಯದಾಗಿ ಅಲ್ಲಿ ಇರುವ ತಿರುಪತಿ ಟ್ರಸ್ಟ್‌ನವರೊಡನೆ ನಾವು ವ್ಯವಹಾರ ನಡೆಸಬೇಕಾಗಿದೆ. ಧರ್ಮ ಛತ್ರಗಳನ್ನು ಅಲ್ಲಿ ಬರತಕ್ಕಂಥ ಹಣದಿಂದಲೇ ನಾವು ಇಂಪ್ರೂವ್‌ಮೆಂಟ್ ಮಾಡಬಹುದು. ಅದಕ್ಕೆ ನಾವು ಹೊಸದಾಗಿ ಹಣವನ್ನೇನು ಕೊಡಬೇಕಾಗಿಲ್ಲ. ಆದರೆ ಮಾನ್ಯ ವಾಟಾಳರು ಕೊಟ್ಟರುವ ಸಲಹೆಯಂತೆ ದೇವರು ಕರ್ನಾಟಕದವರು ಅಲ್ಲ. ದೇವರು ಆಂಧ್ರದವರೆ. ಅಲ್ಲಿರುವ ಪೂಜಾರಿಗಳೆಲ್ಲ ಕರ್ನಾಟಕದವರು.. ಅವರೆಲ್ಲ ಮಾನ್ಯ ಅಧ್ಯಕ್ಷರ ಊರಿನವರು.

ಶ್ರೀ ವಾಟಾಳ್ ನಾಗರಾಜ್: ಸರ್. ದೇವರು ನಮ್ಮ ಕರ್ನಾಟಕದವರು. ಅದಕ್ಕೆ ಬಹಳ ದೊಡ್ಡ ಇತಿಹಾಸವಿದೆ. ಆ ವಿಚಾರದಲ್ಲಿ ನಾನು ಒಪ್ಪುವುದಕ್ಕೆ ತಯಾರಿಲ್ಲ. ನಮ್ಮದೇ ದೇವರು ಅದಕ್ಕೆ ಇತಿಹಾಸ ಇದೆ. ಅಲ್ಲಿ ಇರುವ ಪೂಜಾರಿಗಳು ನಮ್ಮವರೆ. ತಾವು ಹೇಳಿದ್ದುದು ನಿಜ.

ಶ್ರೀಮತಿ. ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ ನಾನು 15 ದಿವಸಗಳ ಹಿಂದೆ ತಿರುಪತಿ ದೇವಸ್ಥಾನಕ್ಕೆ ಹೋಗಿದ್ದೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಹಾಗೆ ಒಂದು ಛತ್ರದಲ್ಲಿನ ರೂಂಗಳು ಪ್ರವಾಸೋದ್ಯಮ ಹಾಗೂ ಕಂದಾಯ ಎರಡೂ ಇಲಾಖೆಗೆ ಸೇರಿದೆ. ಮುಜರಾಯಿ ಇಲಾಖೆಯವರು ಅಚ್ಚುಕಟ್ಟಾಗಿ ನಡೆಸಲಿ ಎಂದು ಬಿಟ್ಟುಕೊಟ್ಟರೆ ನಮ್ಮ ಟೂರಿಸಂನವರು ಅಚ್ಚುಕಟ್ಟಾಗಿ ನಡೆಸುತ್ತಾರೆ' ಎಂದು ನಾನು ಹೇಳಿದೆ. 4 ಕೊಠಡಿಗಳು ನಮ್ಮದು, 8 ಕೊಠಡಿಗಳು ಅವರದು ಇದೆ. ಬಂದಿರತಕ್ಕಂಥವರನ್ನು ಒಂದೊಂದು ಕೊಠಡಿಯಲ್ಲಿ 8-10 ಜನರನ್ನು ಹಾಕುತ್ತಾರೆ. ಅಲ್ಲಿ ಕಸ ಗುಡಿಸುವ ಹಾಗಿಲ್ಲ, ನೀರು ಸರಿಯಾಗಿ ಸರಬರಾಜು ಆಗುವುದಿಲ್ಲ, ಇದರಿಂದ ನಮಗೆ ಕೆಟ್ಟ ಹೆಸರು. ಆದ್ದರಿಂದ ಈಗಲೂ ನಾನು ಕೇಳುವುದೇನೆಂದರೆ- ಮುಜರಾಯಿ ಇಲಾಕೆಯವರು ಅಚ್ಚುಕಟ್ಟಾಗಿ ನಡೆಸಲಿ ಇಲ್ಲದಿದ್ದರೆ ನಮಗೆ ಬಿಟ್ಟುಕೊಟ್ಟರೆ ನಾವಾದರೂ ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗುತ್ತೇವೆ.

ಅಧ್ಯಕ್ಷರು: ಈ 3 ಇಲಾಖೆಯವರದ್ದು ಕ್ಯಾಬಿನೆಟ್ ಇದೆಯಲ್ಲ ಅಲ್ಲಿ ಚರ್ಚೆ ಮಾಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ತಿರುಪತಿ-ತಿರುಮಲದಲ್ಲಿರತಕ್ಕಂಥ ನಮ್ಮ ರಾಜ್ಯದ ಛತ್ರಗಳಲ್ಲಿನ ಕೊಠಡಿಗಳ ಪರಿಸ್ಥಿತಿ ಬಹಳ ಹೀನಾಯವಾಗಿದೆ. ನಾವು ಅಲ್ಲಿ ಭಕ್ತಗೋಸ್ಕರವಾಗಿ, ಪ್ರಾರ್ಥನೆ ಮಾಡುವುದಕ್ಕೋಸ್ಕರ ಹೋಗುತ್ತೇವೆ.

ಅಧ್ಯಕ್ಷರು: ಈಗ ಮುಜರಾಯಿ ಇಲಾಖೆಯ ಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ. ಅವರಿಗೆ ಇದರ ಬಗ್ಗೆ ಅನುಭವ ಇರಬಹುದು... ವಾಟಾಳರು ಟೋಪಿ ಹಾಕುವುದಕ್ಕೆ ಪ್ರಾರಂಭ ಮಾಡಿದ್ದುದು ತಿರುಪತಿಗೆ ಹೋಗಿಬಂದ ಮೇಲೆಯೇ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಅಲ್ಲಿಗೆ ಹೋಗದೆಯೇ ನಾನೇ ಮಾಡಿಕೊಂಡು ಬಿಟ್ಟೆ ಅಲ್ಲಿಗೆ ಹೋಗಿ ತಿರುಪತಿ ಆಗಬೇಕಾಗಿಲ್ಲ. ತಲೆಕೆಡಿಸಿಕೊಂಡುಬಿಟ್ಟು ನಾನೇ ಸ್ವತಃ ತಿರುಪತಿ ಮಾಡಿಕೊಂಡಿದ್ದೇನೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಜಾಲಪ್ಪನವರು ಇದ್ದ ಕಾಲದಲ್ಲಿಯೇ ಅಲ್ಲಿ ಎಲ್ಲಾ ಕೊಠಡಿಗಳ ವ್ಯವಸ್ಥೆಗೆ 18 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ, ಬೆಡ್‌ಶೀಟ್‌ಗಳು, ಬೆಡ್‌ಗಳು ಮತ್ತು ರೂಂ ಸಹಿತ ಚೆನ್ನಾಗಿ ಮಾಡಿಸಿದ್ದರು. ನಾನು ಮಂತ್ರಿ ಆದ ಮೇಲೆ ಹೋಗಿ ನೋಡಿದಾಗ ಅವೆಲ್ಲ ಚೆನ್ನಾಗಿ ಇವೆ. ನಾನು ಎಲ್ಲ ಶಾಸಕರು ಮತ್ತು ಮಂತ್ರಿಗಳಿಗೆ ಲೆಟರ್ ಕೊಟ್ಟಿದ್ದೇನೆ. ಒಬ್ಬರಿಗೂ ಅಲ್ಲಿ ರೂಂ ಇಲ್ಲ ಎನ್ನಕ್ಕಂಥ ವ್ಯವಸ್ಥೆ ಇಲ್ಲ ಅಲ್ಲಿ 170 ರೂಂಗಳು ನಮಗೆ ಇವೆ. ಟೂರಿಸಂನವರೆಗೆ ಕೆಲಸ ಬಹಳ ಕಡಿಮೆ ಇದೆಯೆಂದು ಹೇಳಿ ಅವರಿಗೆ ಒಂದು ಛತ್ರದಲ್ಲಿ ಕೆಳಗಿನ ಫ್ಲೋರ್‌ನ್ನು ಅವರೇ ನಿರ್ವಹಿಸಿಕೊಳ್ಳಲಿ ಎಂದು ಬಿಟ್ಟುಕೊಟ್ಟಿದ್ದೇವೆ. ನಮ್ಮ ಇಲಾಖೆಯು ಯಾವ ತರಹದಲ್ಲಿಯೂ ಹಿಂದುಳಿದಿಲ್ಲ. ಇಲ್ಲಿ ಚೆನ್ನಾಗಿ ಎಲ್ಲ ನಡೆಸುತ್ತಿದ್ದಾರೆ. ಎಲ್ಲ ಮಂತ್ರಿಗಳಿಗೆ ಮತ್ತು ಎಲ್ಲ ಶಾಸಕರುಗಳಿಗೆ ನಾನು ಲೆಟರ್ ಕೊಟ್ಟಿದ್ದೇನೆ. ಒಬ್ಬರು ಸಹ ಇಲ್ಲ ಎಂದು ಹೇಳತಕ್ಕಂಥ ಪ್ರಸ್ನೆಯೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ 'ತಿರುಪತಿಗೆ ಹೋಗಿ ಟೋಪಿ ಹಾಕಿಸಿಕೊಂಡು ಬಂದ' ಎಂದು ಹೇಳಿ ನನಗೊಂದು ವಿಚಾರವನ್ನು ಜ್ಞಾಪಿಸಿದರು. ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ಟೋಪಿ ಹಾಕಿಸೋಣವೆಂದು ಪ್ರಯತ್ನಪಟ್ಟೆ ನಾನು, ಅವರೆಲ್ಲ ಒಟ್ಟಿಗೆ ಬಾಂಬೆಗೆ ಹೋಗಿದ್ದೆವು. ಒಂದು ಕಡೆ ಟೋಪಿ ಅವರಿಗೆ ಹಾಕಿದ್ರೆ ಆದರೆ ವರಿಗೆ ಆ ಟೋಪಿ ಹಿಡಿಯಲಿಲ್ಲ. ನಾನು ಟೋಪಿ ಹಾಕಿಕೊಂಡು ಬಂದೆ ಅವರು ಹಾಕಿಸಿಕೊಳ್ಳಲಿಲ್ಲ. ಅದು ಸುಮಾರು 15-20 ವರ್ಷಗಳ ಹಿಂದೆ ನಡೆದಂಥ ವಿಚಾರ. ಅವರಿಗೆ ಜ್ಞಾಪನ ಇದೆಯೋ ಇಲ್ಲವೋ ಗೊತ್ತಿಲ್ಲ. ನಾನು ಈಗ ಅದನ್ನು ಜ್ಞಾಪಿಸಿದೆ.. ನಾನು ಏನು ಹೇಳಿದ್ದೇನೆ ಅದೆಲ್ಲ ನಿಜ. ತಮ್ಮ ಮುಜರಾಯಿ ಇಲಾಖೆಯಿಂದ ತೊಂದರೆಯಾಗಿದೆಯೆಂದು ನಾನು ಹೇಳುತ್ತಿಲ್ಲ. ಅಲ್ಲಿ ಹೊಸ ಛತ್ರಗಳನ್ನು ಕಟ್ಟಿಸಬೇಕು. ಈಗ ಏನಾಗಿದೆಯೆಂದರೆ- ನಾವು ಪ್ರಾರ್ಥನೆ ಮಾಡುವುದಕ್ಕೆ ಹೋಗುತ್ತೇವೆ, ಭಕ್ತಿಯಿಂದ ಅಲ್ಲಿಗೆ ಹೋಗುತ್ತೇವೆ, ಆದರೆ ಅಲ್ಲಿ ತಿಗಣೆ ಕಚ್ಚಿಸಿಕೊಂಡು ಪ್ರಾರ್ಥನೆ ಬಿಟ್ಟು ತಿಗಣೆ ತೀಡುವ ಪರಿಸ್ಥಿತಿ ಉಂಟಾಗುತ್ತದೆ. ಅದು ಹಾಗೆ ಆಗಬಾರದು ವ್ಯವಸ್ಥಿತವಾಗಿ ಚತ್ರಗಳು ಇರಬೇಕು. ಒಳ್ಳೆಯ ಸುಣ್ಣ, ಒಳ್ಳೆಯ ಬಣ್ಣ ಮತ್ತು ಒಳ್ಳೆಯ ಪೀಠೋಪಕರಣಗಳಿಂದ ಕೂಡಿರಬೇಕು. ಪ್ರವಾಸೋದ್ಯಮ ಇಲಾಖೆಗೆ ಕೊಡುವುದಕ್ಕೆ ಹೋಗಬೇಡಿ. ಅವರಿಗೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿಲ್ಲ. ಪ್ರವಾಸೋದ್ಯಮ ಇಲಾಖೆಗೆ ಕೊಡುವುದು ಬಿಡುವುದು ನಿಮಗೆ ಸೇರಿದ್ದುದು. ಆದ್ದರಿಂದ ಮಂತ್ರಿಗಳು ಈ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ: ಮಾನ್ಯ ಅಧ್ಯಕ್ಷರೆ, ಅಲ್ಲಿ ರೂಂನ್ನು ಕಟ್ಟಲಿಕ್ಕೆ ಧಾನಿಗಳು ಸಹ ತಯಾರಿದ್ದಾರೆ. ಆದರೆ ಅಲ್ಲಿ ಕಮಿಟಿಯಿಂದ ನಮಗೆ ಸ್ವಲ್ಪ ದಿವಸ ಅಬ್ಜೆಕ್ಷನ್ ಇದ್ದ ಕಾರಣ ಆ ಕೆಲಸ ಆಗಲಿಲ್ಲ ಅದನ್ನು ನಾನು ಇಷ್ಟರಲ್ಲಿಯೇ ಬಗೆಹರಿಸುತ್ತೇನೆ. ಮತ್ತು ರೂಂಗಳನ್ನು ಕಟ್ಟಿಸಲು ಸಿದ್ದರಿರುವ ದಾನಿಗಳಿಂದ ರೂಂಗಳನ್ನು ಕಟ್ಟಿಸುವ ವ್ಯವಸ್ಥೆಯನ್ನು ಸಹ ಮಾಡಿಸುತ್ತೇನೆಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಭಕ್ತಾದಿಗಳನ್ನು ಲೆಕ್ಕ ಹಾಕಿದರೆ, ಕರ್ನಾಟಕದಿಂದ ತಿರುಪತಿಗೆ ಹೋಗತಕ್ಕಂಥ ಭಕ್ತಾದಿಗಳ ಸಂಖ್ಯೆ ಬಹಳ ಜಾಸ್ತಿ ಇದೆ. ಆದರೆ ಇವತ್ತಿನವರೆಗೂ ಆ ಮಂಡಳಿಯಲ್ಲಿ ಕರ್ನಾಟಕದವರನ್ನು ನಾಮಕರಣ ಮಾಡಿಲ್ಲ. ಹಿಂದೆ ನಾಮಕರಣ ಮಾಡುತ್ತಿದ್ದರು. ಇವತ್ತು ಆ ಪದ್ಧತಿ ಇಲ್ಲ. ಆದ್ದರಿಂದ ಇದರ ಬಗ್ಗೆ ಆಂಧ್ರದ ಮುಖ್ಯಮಂತ್ರಿಗಳ ಜೊತೆಗೆ ತಾವು ದಯಮಾಡಿ ಮಾತನಾಡಬೇಕು. ನಮ್ಮವರನ್ನು ಮಂಡಲಿಯಲ್ಲಿ ನಾಮಕರಣ ಮಾಡಿಕೊಳ್ಳಬೇಕು.

ಶ್ರೀ ಜೆ.ಹೆಚ್. ಪಟೇಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳರ ಸಲಹೆಯಂತೆ ಇದರ ಬಗ್ಗೆ ಆಂಧ್ರದ ಮುಖ್ಯಮಂತ್ರಿಗಳನ್ನು ಸಂಪರ್ಕಿಸಿ ನಂತರ ಏನು ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಇಲ್ಲ...

ಅಧ್ಯಕ್ಷರು: ಅವರು ಆಂಧ್ರದ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್: ಆಯಿತು, ಆಂಧ್ರದ ಮುಖ್ಯಮಂತ್ರಿಗಳ ಜೊತೆ ತಾವು ಮಾತನಾಡಿ. ನಮ್ಮದು ಮೊದಲನೆಯ ಪೂಜೆ ಆಗಬೇಕೆಂದು ಇತಿಹಾಸದಲ್ಲಿ ಇದೆ. ಅದನ್ನು ತಾವು ದಯಮಾಡಿ ಮಾಡಬೇಕು.

ಶ್ರೀಮತಿ ಬಿ.ಟಿ. ಲಲಿತಾನಾಯಕ್: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಮಾತನಾಡುತ್ತೇನೆ. ಅಲ್ಲಿ ಕಳ್ಳರು ಇದ್ದಾರೆ ಎಚ್ಚರಿಕೆ ಎಂದು ಇದೆ. ಆದ್ದರಿಂದ ಮೊದಲು ದೇವರು, ಪೂಜಾರಿ ಬಿಟ್ಟು ದಯವಿಟ್ಟು ಅಲ್ಲಿ ಕಳ್ಳಲು ಇಲ್ಲದ ಹಾಗೆ ಮಾಡಬೇಕು. ಅಲ್ಲಿ ಹೋಗುವವರು ಬರುವವರು ಜೇಬು ಕತ್ತರಿಸುತ್ತಾರೆ.

ಬಹುಮಹಡಿ ಕಟ್ಟಡದ ಒಳ ಇರುವ ಶ್ರೀ ರಾಮಾಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಖಾಲಿ ಇರುವ ಜಾಗ

113 (817) ಶ್ರೀ ಎನ್. ರಾಜಣ್ಣ (ಭಾರತೀ ನಗರ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಖಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಹುಮಹಡಿ ಕಟ್ಟಡದ ಬಳಿ ಇರುವ ಖಾಲಿ ಜಾಗ ಮತ್ತು ಶ್ರೀರಾಂಜನೇಯಸ್ವಾಮಿ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಲ್ಲಿ ಭೂಮಿಯ ವಿಸ್ತೀರ್ಣ?

ಇ) ಮುಜರಾಯಿ ಇಲಾಖೆಯ ಕಛೇರಿಗೆ ಶಾಶ್ವತ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರವು ಪರಿಶೀಲಿಸುತ್ತಿದೆ ಪ್ರಸ್ತುತ ಅದನ್ನು ಮಾರಕಟ್ಟೆಯಂತೆ ಉಪಯೋಗಿಸಲಾಗುತ್ತಿದೆಯೇ;

ಶ್ರೀ ಸಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):